ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ.



ಒಂದೂವರೆ ದಶಕದ ಹಿಂದಿನ ಮಾತು. ಬೆಂಗಳೂರಿನ ಶ್ರೀರಾಮಪುರದಲ್ಲಿ ರೈಲು ಹಳಿ ಹಾದುಹೋಗಿರುವ ಜಾಗದ ಪಕ್ಕ ಜನ ಜಮಾಯಿಸಿದ್ದರು. ಅವರನ್ನು ತೂರಿಕೊಂಡು ಇಣುಕಿದಾಗ ಪೊಲೀಸ್ ಪೇದೆಯೊಬ್ಬರು ಕೈಯಲ್ಲಿ ರುಂಡವೊಂದನ್ನು ಹಿಡಿದುಕೊಂಡು ನಡೆದು ಬರುತ್ತಿದ್ದರು. ದೂರದಲ್ಲೆಲ್ಲೋ ಆ ರುಂಡಕ್ಕೆ ಸೇರಿದ ಮುಂಡದ ತುಂಡುಗಳು ಬಿದ್ದಿದ್ದವು. ಗುಂಪಿನಲ್ಲಿದ್ದ ಒಬ್ಬರು ಆಗ ಸ್ವಗತವಾಡಿಕೊಂಡಿದ್ದು ಹೀಗೆ: ‘ಈ ರೈಲು ಚಾಲಕರು ಇಷ್ಟೊಂದು ಸಾವುಗಳನ್ನು ಹೇಗೆ ಜೀರ್ಣಿಸಿಕೊಳ್ಳುವರೋ?’

| | | |
|---|---|---|
| ಚಿತ್ರ | : | ಟ್ರೇನ್ ಡ್ರೈವರ್ಸ್ ಡೈರಿ |
| ಚಿತ್ರಕಥೆ–ನಿರ್ದೇಶನ | : | ಮಿಲೋಸ್ ರ್‍ಯಾಡೋವಿಕ್ |
| ನಿರ್ಮಾಪಕರು | : | ಲಜಾರ್ ರಿಸ್ತೊವ್‌ಸ್ಕಿ, ಪೆಟರ್ ರಿಸ್ತೊವ್‌ಸ್ಕಿ, ಇವಾನ್ ಮಲೊಕಾ, ಮಿಯೊಡ್ರ್ಯಾಗ್ ಸ್ಟೆವನೊವಿಕ್ |
| ತಾರಾಗಣ | : | ಲಜಾರ್ ರಿಸ್ತೊವ್‌ಸ್ಕಿ, ಪೆಟರ್ ಕೊರಾಕ್, ಪಾವ್ಲೆ ಎರಿಕ್, ಮಿರ್ಜಾನಾ ಕರನೊವಿಕ್, ಜೆಸ್ನಾ ಡ್ಯುರಿಸಿಸ್ |
| ದೇಶ | : | ಸರ್ಬಿಯಾ |